ಆ) ಸ್ಥಳೀಯ ಮೀನುಗಾರರಿಗೆ ಯಗಚಿ ಜಲಾಶಯದಲ್ಲಿ ಮೀನುಗಾರಿಕೆ ನಡೆಸಲು ಅವಕಾಶ ನೀಡುತ್ತಿಲ್ಲ ನಿಜವೇ ;

ಇ) ಸ್ಥಳೀಯ ಮೀನುಗಾರರ ರಕ್ಷಣೆಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಆನಂದ ವಸಂತ ಅಸ್ನೋಟಿಕರ್ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):–

ಅ) ಬೇಲೂರಿನಲ್ಲಿರುವ ಯಗಚಿ ಜಲಾಶಯದ ಮೀನು ಪಾಶುವಾರು ಹಕ್ಕನ್ನು ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾಮಂಡಳಿ (ನಿ) ಮೈಸೂರುರವರಿಗೆ ದಿನಾಂಕ : 01–07–2010 ರಿಂದ ಐದು ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ.

ಆ) ಇಲ್ಲ. 2011–12ನೇ ಸಾಲಿನ ಏಪ್ರಿಲ್‌ನಿಂದ ಬೇಲೂರು ತಾಲ್ಲೂಕಿನ 83 ಸ್ಥಳೀಯ ಮೀನುಗಾರರಿಗೆ ಗುರುತಿನ ಚೀಟಿ ನೀಡಿ ಯಗಚಿ ಜಲಾಶಯದಲ್ಲಿ ಮೀನು ಹಿಡಿಯಲು ಅವಕಾಶ ಕಲ್ಪಿಸಲಾಗಿದೆ.

ಇ) ಬೇಲೂರಿನ ಯಗಚಿ ಜಲಾಶಯದ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ಮಾಡಿದ ಸಮೀಕ್ಷೆಯಂತೆ ಆ ಪ್ರದೇಶದಲ್ಲಿ ಅಂದಾಜು 115 ಜನ ವೃತ್ತಿನಿರತ ಮೀನುಗಾರರಿರುವುದು ಕಂಡುಬಂದಿರುತ್ತದೆ. ಅವರ ಪೈಕಿ ಆಸಕ್ತಿ ವಹಿಸಿದ 83 ಜನ ಸ್ಥಳೀಯ ಮೀನುಗಾರರಿಗೆ ಗರುತಿನ ಚೀಟಿ ನೀಡಿ ಯಗಚಿ ಜಲಾಶಯದಲ್ಲಿ ಮೀನು ಹಿಡಿಯಲು ಅವಕಾಶ ಕಲ್ಪಿಸಲಾಗಿದೆ. ಉಳಿದ ಅರ್ಹ ವೃತ್ತಿನಿರತ ಸ್ಥಳೀಯ ಮೀನುಗಾರರು ಆಸಕ್ತಿ ವಹಿಸಿ ಮುಂದೆ ಬಂದಲ್ಲಿ ಅವರಿಗೂ ಸಹ ಯಗಚಿ ಜಲಾಶಯದಲ್ಲಿ ಮೀನು ಹಿಡಿಯಲು ಅವಕಾಶ ಕಲ್ಪಿಸಲಾಗುವುದು.

ರಾಸಾಯನಿಕ ಗೊಬ್ಬರದ ಬೆಲೆ

327 (645) ಶ್ರೀ ರುದ್ರೇಶಗೌಡ ವೈ.ಎನ್. (ಬೇಲೂರು) :– ಮಾನ್ಯ ಕೃಷಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕರ್ನಾಟಕ ರಾಜ್ಯದಲ್ಲಿ ರಾಸಾಯನಿಕ ಗೊಬ್ಬರದ ಬೆಲೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ರೈತರು ಉಪಯೋಗಿಸುವ ಡಿ.ಎ.ಪಿ., ವಿಜಯ ಕಾಂಪ್ಲೆಕ್ಸ್, ಸುಫಲಾ, ಪೋಟ್ಯಾಷ್, ಯೂರಿಯಾ ಈ ಗೊಬ್ಬರಗಳ ಹಿಂದಿನ ಬೆಲೆ ಹಾಗೂ ಇತ್ತೀಚೆಗೆ ಏರಿಕೆಯಾದ ನಂತರದ ಬೆಲೆ ಏನು ;

ಇ) ಈ ಬೆಲೆ ಏರಿಕೆಯಿಂದ ಸಣ್ಣ ರೈತರು ತಮ್ಮ ಜಮೀನಿಗೆ ಗೊಬ್ಬರ ಕೊಳ್ಳಲು ಸಾಧ್ಯವೇ ;

ಈ) ರಾಸಾಯನಿಕ ಗೊಬ್ಬರದ ಬೆಲೆ ಇಳಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ;

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು):–

ಅ) ಹೌದು. ಕೇಂದ್ರ ಸರ್ಕಾರವು ದಿನಾಂಕ : 01–04–2010 ರಿಂದ ಪೋಷಕಾಂಶ ಆಧಾರಿತ ಸಹಾಯಧನ ನೀತಿಯನ್ನು ಜಾರಿಗೆ ತಂದಿರುತ್ತದೆ. ಆ ಪ್ರಕಾರ, ರಸಗೊಬ್ಬರ ತಯಾರಕರು ರಸಗೊಬ್ಬರ ಉತ್ಪಾದನಾ ವೆಚ್ಚ ಆಧಾರದ ಪ್ರಕಾರ ರಸಗೊಬ್ಬರಗಳ ಗರಿಷ್ಟ ಮಾರಾಟ ಬೆಲೆಯನ್ನು ನಿಗದಿಪಡಿಸುವ ಅಧಿಕಾರ ಹೊಂದಿರುತ್ತಾರೆ. ರಸಗೊಬ್ಬರಗಳ ಉತ್ಪಾದನಾ ವೆಚ್ಚವು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ರಸಗೊಬ್ಬರಗಳ ತಯಾರಿಕೆಗೆ ಬೇಕಾದ ಕಚ್ಚಾ ಸಾಮಾಗ್ರಿಗಳ ಬೆಲೆಯಲ್ಲಿ ಏರಿಕೆಯಾಗಿರುವುದರಿಂದ ರಸಗೊಬ್ಬರದ ಗರಿಷ್ಟ ಮರಾಟ ಬೆಲೆಯು ಆಗಿಂದಾಗ್ಗೆ ಹಾಗು ವಿವಿಧ ಕಂಪನಿಗಳ ದರಗಳಲ್ಲಿ ವ್ಯತ್ಯಾಸವಿರುತ್ತದೆ.

ಆ)

ಕ್ರ. ಸಂ. Sl. No.	ರಸಗೊಬ್ಬರಗಳು Fertilizers	01.04.2010ರ ಮೊದಲು 50 ಕೆ.ಜಿ. ಚೀಲದ ಗರಿಷ್ಟ ಮಾರಾಟ ಬೆಲೆ (ತೆರಿಗೆ ಸೇರಿ) (ರೂ.ಗಳಲ್ಲಿ)	01.04.2011 ರವರೆಗೆ 50 ಕೆ.ಜಿ. ಚೀಲದ ಗರಿಷ್ಟ ಮಾರಾಟ ಬೆಲೆ (ತೆರಿಗೆ ಸೇರಿ) (ರೂ.ಗಳಲ್ಲಿ)	ಪ್ರಸಕ್ತ Latest 50 ಕೆ.ಜಿ. ಚೀಲದ ಗರಿಷ್ಟ ಮಾರಾಟ ಬೆಲೆ (ತೆರಿಗೆ ಸೇರಿ) (ರೂ.ಗಳಲ್ಲಿ)
1	ಯೂರಿಯಾ Urea	251.16	281.16	281.10 – 281.67
2	ಡಿ.ಎ.ಪಿ. DAP	486.20	615 – 662.25	950.70 – 969.73
3	ಎಂ.ಒ.ಪಿ. MOP	231.66	268.12 – 315	588 – 594
4	ಸುಫಲಾ Suphala (15:15:15)	266.29	407.87	609.96
5	ವಿಜಯ ಕಾಂಪ್ಲೆಕ್ಸ್ Vijaya Complex (17:17:17)	301.81	ಸರಬರಾಜು ಇರುವುದಿಲ್ಲ No supplies	ಸರಬರಾಜು ಇರುವುದಿಲ್ಲ No supplies

ಇ) ರೈತರು ಬೆಳೆಯುವ ಬೆಳೆಗಳಲ್ಲಿ ಹೆಚ್ಚಿನ ಇಳುವರಿ ಪಡೆಯುವ ಸಲುವಾಗಿ ರಸಗೊಬ್ಬರಗಳ ಬಳಕೆ ಅವಶ್ಯಕವಿರುತ್ತದೆ.

ಈ) ರಸಗೊಬ್ಬರ ಬೆಲೆ ನಿರ್ಧರಿಸುವ ನೀತಿಯು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ.

ರಸ್ತೆಗಳನ್ನು ಡಾಂಬರೀಕರಣ ಮಾಡಲು ಅನುದಾನ ಬಿಡುಗಡೆ

330 (351) ಶ್ರೀ ಸಂಗಮೇಶ್ವರ ಬಿ.ಕೆ. (ಭದ್ರಾವತಿ) :– ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಭದ್ರಾವತಿ ನಗರಸಭೆ ವ್ಯಾಪ್ತಿಯ 35 ವಾರ್ಡ್‌ಗಳ ರಸ್ತೆಗಳನ್ನು ಸಂಪೂರ್ಣವಾಗಿ ಗುಂಡಿಗಳು ಬಿದ್ದು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಬಂದಿದ್ದಲ್ಲಿ, ಈ ರಸ್ತೆಗಳನ್ನು ಡಾಂಬರೀಕರಣ ಮಾಡಲು ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಹಲವಾರು ಭಾರಿ ಪ್ರಸ್ತಾವನೆಯನ್ನು ಸಲ್ಲಿಸಿದರೂ ಈವರೆಗೆ ಅನುದಾನ ಬಿಡುಗಡೆ ಮಾಡಿರುವುದಿಲ್ಲ ಯಾವಾಗ ಅನುದಾನ ಬಿಡುಗಡೆ ಮಾಡಲಾಗುವುದು ?

ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೋಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು):–

ಅ) ಹೌದು.

ಆ) 2011–12ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ ಅನುದಾನದಡಿಯಲ್ಲಿ ನಿಗದಿಗೊಳಿಸಿದ ರೂ. 757.46 ಲಕ್ಷಗಳ ಅನುದಾನದಲ್ಲಿ ಗುಂಡಿಗಳನ್ನು ಮುಚ್ಚಲು ರೂ. 13.80 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

ಪರ್ಯಾಯ ಸೇತುವೆ ನಿರ್ಮಾಣ

331 (352) ಶ್ರೀ ಸಂಗಮೇಶ್ವರ ಬಿ.ಕೆ. (ಭದ್ರಾವತಿ) :– ಮಾನ್ಯ ಲೋಕೋಪಯೋಗಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೆಂಗಳೂರು, ಹೊನ್ನಾವರ, ಭದ್ರಾವತಿಯ ನಗರದ ಒಳಗಡೆಯಿಂದ ಹೋಗುವ ಲೋಕೋಪಯೋಗಿ ಇಲಾಖೆಗೆ ಸೇರಿದ 150 ವರ್ಷದ ಸೇತುವೆಯು